# ಫೇಸ್‌ಬುಕ್‌ನಿಂದ ಇಲ್ಲಿಯತನಕ...



**ದಿವ್ಯಾ ಉರುಡುಗ**
ಕಲರ್ಸ್ ಕನ್ನಡದ
'ನಿನಗಾಗಿ' ರಚ್ಚು

◆ 'ನಿನಗಾಗಿ' ಧಾರಾವಾಹಿಯಲ್ಲಿ ನಿಮ್ಮ ಪಾತ್ರ ಹೇಗಿದೆ?

ರಚ್ಚು ಲೇಡಿ ಸೂಪರ್ ಸ್ಟಾರ್. ಆಕೆ ತನ್ನ ತಾಯಿಯ ಆಸೆಯನ್ನು ಈಡೇರಿಸುವ ಸಂಬಂಧ ಬಣ್ಣದ ಜಗತ್ತಿಗೆ ಬಂದಿರುತ್ತಾಳೆ. ಅಭಿಮಾನಿಗಳು ಆರಾಧಿಸುವ ಮಟ್ಟಿಗೆ ಅವಳು ಬೆಳೆಯುತ್ತಾಳೆ. ಅವಳೆಂದರೆ ಅಭಿಮಾನಿಗಳಿಗೆ ಪ್ರಾಣ. ಆಕೆಗೆ ಸೂಪರ್ ಸ್ಟಾರ್ ಅನಿಸಿಕೊಳ್ಳುವುದಕ್ಕಿಂತ ಸಾಮಾನ್ಯ ಹುಡುಗಿಯಂತೆ ಜೀವನ ಮಾಡಬೇಕು ಎನ್ನುವ ಆಸೆ. ತನ್ನ ಮನೆಯಲ್ಲಿ ಅಡುಗೆಯನ್ನು ಅವಳೇ ಮಾಡಬೇಕು. ಆಗಾಗ ಮನೆಯವರನ್ನು ಕರೆದುಕೊಂಡು ಊಟಕ್ಕೆ ಹೊರಗಡೆ ಹೋಗಬೇಕು. ಬೀದಿಬದಿಯಲ್ಲಿ ನಿಂತು ಪಾನಿಪೂರಿ ತಿನ್ನಬೇಕು ಎನ್ನುವುದೆಲ್ಲ ಅವಳ ಆಸೆ. ಇಂತಹ ಚಿಕ್ಕಪುಟ್ಟ ಆಸೆಗಳಿರುವ ಹುಡುಗಿಗೆ ಅದ್ದೂರಿಯ ಜೀವನ ಒಗ್ಗುತ್ತಿಲ್ಲ. ಸರಳ ಜೀವನವನ್ನು ಪ್ರೀತಿಸುವ ಹುಡುಗಿಗೆ ಎಲ್ಲದಕ್ಕೂ ಒಬ್ಬೊಬ್ಬ ಆಳು.

◆ ದಿವ್ಯಾ ಬಣ್ಣ ಹಚ್ಚಿದ್ದು ಹೇಗೆ?

ನನ್ನ ಬದುಕು ಹೀಗೆ ಪಲ್ಲಟವಾಗುತ್ತದೆ ಎಂದು ಭಾವಿಸಿರಲಿಲ್ಲ. ನಾನು ಆರ್ಟಿಸ್ಟ್ ಆಗುತ್ತೇನೆ ಎನ್ನುವ ಯೋಚನೆಯನ್ನೂ ಮಾಡಿರಲಿಲ್ಲ. ನನ್ನ ಫೇಸ್‌ಬುಕ್ ಖಾತೆಯಲ್ಲಿ ಫೋಟೊಗಳನ್ನು ನೋಡಿ ಮೊದಲ ಅವಕಾಶ ಬಂತು. ಆ ಕರೆ ಬಂದಾಗ ಏಕೆ ಆಗಬಾರದು ಎನ್ನುವ ಪ್ರಶ್ನೆ ನನ್ನಲ್ಲೇ ಮೂಡಿತು. ಒಂದು ಕೈ ನೋಡಿಯೇ ಬಿಡೋಣ ಎಂದು ಬಣ್ಣ ಹಚ್ಚಿಯೇ ಬಿಟ್ಟೆ. ಪ್ರಯತ್ನ ಮಾಡಿ, ಆಡಿಷನ್ ಕೊಟ್ಟು ಅವಕಾಶಕ್ಕಾಗಿ ಪ್ರಯತ್ನ ಮಾಡಲಿಲ್ಲ. ಅದಾಗಿಯೇ ಹುಡುಕಿಕೊಂಡು ಬಂದಿದೆ ಎಂದೇ ಪ್ರಯತ್ನ ಮಾಡಿದೆ. ನನಗೆ ಆಗದಿದ್ದರೂ ಅಂತಹ ಬೇಸರ ಇರಲಿಲ್ಲ. ಆಗಿದ್ದೆಲ್ಲ ಒಳ್ಳೆಯದಾಯಿತು ಅಷ್ಟೇ.

◆ ಸೆಲೆಬ್ರಿಟಿ ಜೀವನವನ್ನು ನೀವು ಸಂಭ್ರಮಿಸುತ್ತೀರಾ?

ಇಲ್ಲ. ಒಂದು ರೀತಿಯಲ್ಲಿ ಹೇಳಬೇಕು ಎಂದರೆ ನಾನೇ ರಚ್ಚು ಎನ್ನಬಹುದು. ಇದೇ ಕಾರಣಕ್ಕೆ ಈ ಪಾತ್ರವನ್ನು ಅಭಿನಯಿಸಲು ನನಗೆ ಕಷ್ಟ ಎಂದು ಅನ್ನಿಸಲಿಲ್ಲ. ಯಾವುದೂ ಶಾಶ್ವತ ಅಲ್ಲ. ಜನರ ನೆನಪು ತುಂಬ ಕ್ಷಣಿಕ. ಎಂಥ ಸೂಪರ್ ಸ್ಟಾರ್ ಆದರೂ ಆ ಪಟ್ಟ ತಾತ್ಕಾಲಿಕ. ಹಾಗಿರುವಾಗ ನಾವು ಸರಳ ಎನ್ನುವುದಕ್ಕಿಂತ ವಾಸ್ತವವನ್ನು ಅರಿತು ಬದುಕಿದರೆ ಸಾಕು. ಮುಂಚೆ ನಾನು ಹೇಗೆ ಇರ್ತಿದ್ದೆ, ಹೇಗೆ ಬದುಕುತ್ತಿದ್ದೆ ಅದೇ ನನಗೆ ಇಷ್ಟ. ಬೆಳವಣಿಗೆಯ ಅಹಂ ಅಥವಾ ಗತ್ತು ಪ್ರದರ್ಶನ ಮಾಡಿ ಆಗಬೇಕಾದ್ದು ಏನಿದೆ? ಅದರಿಂದ ಬರಬಹುದಾದ ಭಾಗ್ಯವಾದರೂ ಏನು? ಇವತ್ತಿಗೂ ನಾನು ಸೆಟ್‌ಗೆ ಸರಿಯಾದ ಸಮಯಕ್ಕೆ ಹೋಗುತ್ತೇನೆ. ಐದು ನಿಮಿಷ ತಡವಾದರೂ ಭಯ ಕಾಡುತ್ತದೆ. ಆ ಭಯ ಒಳ್ಳೆಯದು, ಅದು ಎಲ್ಲಿಯತನಕ ಇರುತ್ತದೋ ಅಲ್ಲಿಯ ತನಕ ಒಳ್ಳೆಯದೇ.

◆ ಕಾಲೇಜು ದಿನಗಳ ಕನಸು ಹೇಗಿದ್ದವು?

ಹೌದಲ್ವಾ? ನನಗೆ ಕನಸೇ ಇರಲಿಲ್ವಾ ಎಂದು ನೀವು ಕೇಳಿದಾಗ ಅನ್ನಿಸುತ್ತಿದೆ. ಬಿ.ಎಸ್‌ಸಿ. ಮುಗಿಸಿ ಕ್ಯಾಂಪಸ್ ಸೆಲೆಕ್ಷನ್ ಆಗಿದ್ದೆ. ವೆಬ್‌ಡಿಸೈನಿಂಗ್ ಕೆಲಸದ ತರಬೇತಿಯೂ ಆರಂಭವಾಗಿತ್ತು. ಆಗ ದೊಡ್ಡದಾಗಿ ಯೋಚನೆಯನ್ನೇ ಮಾಡಿರಲಿಲ್ಲ ಎನ್ನಬಹುದು. ಹಾಗಾಗಬೇಕು ಹೀಗಾಗಬೇಕು ಎಂದೂ ಯೋಚಿಸಿರಲಿಲ್ಲ. ನಾರ್ಮಲ್ ಬದುಕು ಇಷ್ಟವಿತ್ತು. ಕೆಲಸ ಸಿಕ್ಕಿದೆ. ಅಪ್ಪ–ಅಮ್ಮನನ್ನು ಚೆನ್ನಾಗಿ ನೋಡಿಕೊಳ್ಳುವುದಾಗಿತ್ತು. ಆ ಗುರಿಯೇ ಅಂತಿಮ. ಈಗಲೂ ಅದು ಬದಲಾವಣೆ ಆಗಿಲ್ಲ.

◆ 'ಬಿಗ್ ಬಾಸ್' ನಂತರದ ಪಯಣ ಹೇಗಿದೆ?

ತುಂಬ ಚೆನ್ನಾಗಿದೆ. ಅನೇಕ ಕಡೆ ನನ್ನನ್ನು ಗುರುತಿಸುತ್ತಾರೆ. ಅದು ಒಳ್ಳೆಯ ಹೆಸರನ್ನು ತಂದುಕೊಟ್ಟಿದೆ. ಅನೇಕ ಕಾರ್ಯಕ್ರಮಗಳಿಗೆ ಪ್ರೀತಿಯಿಂದ ಆಹ್ವಾನಿಸುತ್ತಾರೆ. ನನ್ನ ಖಾಸಗಿ ಜೀವನ ಕೂಡ ತುಂಬ ಚೆನ್ನಾಗಿದೆ.

◆ ರಿಯಾಲಿಟಿ ಶೋಗೆ ಮತ್ತೊಮ್ಮೆ ಅವಕಾಶ ಬಂದರೆ ಏನು ಮಾಡ್ತೀರಿ?

'ಬಿಗ್ ಬಾಸ್' ಸೀಸನ್ 8ರಲ್ಲಿ ಭಾಗವಹಿಸಿದ್ದೆ. ಮರು ವರ್ಷವೇ ಮತ್ತೆ ಸ್ಪರ್ಧಿಸುವ ಅವಕಾಶ ಸಿಕ್ಕಿತ್ತು. ಎರಡು ಬಾರಿ ಹೋಗಿ ಬಂದಿದ್ದರಿಂದ ನಾನೇ ಬರ್ತೀನಿ ಅಂದ್ರು ಮತ್ತೆ ಕರೆದುಕೊಳ್ಳುವುದಿಲ್ಲ ಎಂದೆನಿಸುತ್ತದೆ. ಬೇರೆ ರಿಯಾಲಿಟಿ ಶೋ ಎನ್ನುವುದಾದರೆ, ಎಲ್ಲಿಯ ತನಕ ಆ ಬಗ್ಗೆ ಕಾತರ ಇರುತ್ತೋ ಅಲ್ಲಿಯ ತನಕ ತೊಂದರೆ ಇಲ್ಲ. ಪಾತ್ರವೇ ಆಗಿದ್ದರೂ ವಾವ್ ಹೀಗಿರಬೇಕು ಎನ್ನುವ ಕೌತುಕ ಹುಟ್ಟಿದರೆ ಮಾತ್ರ ಒಪ್ಪುತ್ತೇನೆ. ಅಂತಹ ರಿಯಾಲಿಟಿ ಶೋ ಬಂದಿದ್ದೇ ಆದರೆ, ಅದನ್ನು ಖಂಡಿತ ಒಪ್ಪುತ್ತೇನೆ.

◆ ಪಾತ್ರದಲ್ಲಿ ಯಾವ ಮೌಲ್ಯವನ್ನು ನೋಡಿ ಇಷ್ಟಪಡುತ್ತೀರಿ?

ಯಾವುದೋ ಒಂದು ಪಾತ್ರದ ವಿನ್ಯಾಸ ಇಷ್ಟ ಆಗಲು, ಅದಕ್ಕೆ ಪರಿಮಿತ ಇರಬೇಕು. ಸರಳರೇಖೆಯಂತೆ ಇರಬಾರದು. ಆ ಪಾತ್ರದಿಂದ ಮಹತ್ವದ್ದು ಏನೋ ಘಟಿಸಬೇಕು. ತೆರೆಯಲ್ಲಿ ದೀರ್ಘವಾಗಿ ಇರುವುದಕ್ಕಿಂತ ಆ ಪಾತ್ರ ಏನು ಪರಿಣಾಮ ಬೀರಿತು ಎನ್ನುವುದು ಮುಖ್ಯ. ಸಿನಿಮಾ ಪೂರಾ ಕಾಣಿಸಿಕೊಂಡು ಕಥೆಯಲ್ಲಿ ಹೇಳುವಂತಹ ಪ್ರಭಾವ ಬೀರದಿದ್ದರೆ ನನ್ನ ದೃಷ್ಟಿಯಲ್ಲಿ ಅಷ್ಟೇನೂ ಮುಖ್ಯ ಅಲ್ಲ. ಐದು ನಿಮಿಷ ಇದ್ದರೂ ಸಖತ್ ಇಂಪ್ಯಾಕ್ಟ್ ಮಾಡ್ತೀನಿ ಅನ್ನಿಸಿದರೆ ಆ ಪಾತ್ರ ಒಪ್ಪುತ್ತೇನೆ.

■ ರಾಘವೇಂದ್ರ ಕೆ.